ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಅಕ್ಸೆಪ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಡೆಪ್ಯುಟಿ ಮಿನಿಸ್ಟರ್ ಆಗಿದ್ದಾಗ ಇದನ್ನು ಅಕ್ಸೆಪ್ಟ್ ಮಾಡಬೇಕೆಂದು ಆದೇಶ ಕೊಟ್ಟಿದ್ದೆ. ಆ ಕಾಲಕ್ಕೆ ಅದು ಆಗಲಿಲ್ಲ. ನಾನು ಹೋದಮೇಲೆ ನಮ್ಮದು (ಒ) ಕಾಂಗ್ರೆಸ್ ಸರ್ಕಾರ ಬಂದ ಮೇಲೆ ನೀವು ಇದರ ಬಗ್ಗೆ ಒತ್ತಾಯ ಮಾಡಿರಬೇಕು. ಆ ಸರ್ಕಾರವೂ ಕೂಡ ಅದನ್ನು ಮಾಡಲಿಲ್ಲ. ಈ ಸರ್ಕಾರ ಬಂದಮೇಲೆ ಇದನ್ನು ಮಾಡಬೇಕೆಂದು ಚೆಮ್ಮಾರರು ಬೆನ್ನು ಹತ್ತಿದ್ದಾರೆ. ಅದನ್ನು ಮಾಡಿಕೊಡುತ್ತೇವೆ.

ಶ್ರಿ ಜೆ. ಎಲ್. ಕಬಾಡಿ.—ಈಗಾಗಲೇ ಹರಿಜನರಿಗೆ ಜಾಗ ಕೊಡದೇ ಇರುವುದರಿಂದ ಕೆಲವು ಮಾಲೀಕರುಗಳು ಕೆಲವು ಹರಿಜನರನ್ನು ತಮ್ಮ ಕೈಕೆಳಗೆ ತೆಗೆದುಕೊಂಡು ಅವರಿಗೆ ಕೆಲವು ಜಾಗಗಳನ್ನು ಹೆಚ್ಚಿನ ಬೆಲೆಗೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಇದು ಸರ್ಕಾರದ ಗಮನಕ್ಕೆ ಬಂದಿಲ್ಲ. ಯಾರ್ಯಾರು ಖರೀದಿ ಮಾಡಿಕೊಂಡಿದ್ದಾರೋ ಅದು ನಮ್ಮ ಗಮನಕ್ಕೆ ಬರುವುದಿಲ್ಲ. ಅಕ್ಸಿಸಿಷನ್ ಆಕ್ಟಿನ 4ನೇ ಕಲಂ ಪ್ರಕಾರ ಹೇಳಿರುವ ಹಾಗೆ ನಂತರ ಪರಭಾರೆ ಮಾಡಿದ್ದರೂ ಕೂಡ ಅದು ಅಫ್ಸಾಗಿ ಕಾನೂನು ಪ್ರಕಾರ ಸಿದ್ಧಿಯಾಗುವುದಿಲ್ಲ.

Allotment of Scooters

815. Sri K. MADE GOWDA (Bannur).—

Will the Minister for Labour be pleased to state:—

(*a*) the number of applications received for allotment of scooters from January 1972 to this date ;

(*b*) the persons to whom the scooters were allotted ;

(*c*) the basis on which the allotment was made ?

Sri AZEEZ SAIT (Minister for Labour).—

(*a*) 2,223 applications were received from January 1972 to end of February, 1973.

(*b*) The list placed on the Table of the House. *

(*c*) Need, urgency and priority of the applicants.

ಶ್ರೀ ಕೆ. ಮಾದೇಗೌಡ.—ಈ ಸ್ಕೂಟರ್‌ಗಳನ್ನು ಪ್ರೈಯಾರಿಟಿಯ ಮೇಲೆ ಕೊಡುತ್ತೇವೆ ಎಂಬುದಾಗಿ ಹೇಳಿದ್ದೀರಿ. ಹೀಗೆ ಪ್ರೈಯಾರಿಟಿಯ ಮೇಲೆ ಕೊಡುವ ಕಾಲದಲ್ಲಿ ಸರ್ಕಾರದಿಂದ ಪ್ರೈಯಾರಿಟಿಯ ಮೇಲೆ ತೆಗೆದುಕೊಂಡಿರುವವರು ಯಾವ ಪ್ರಾತ್ರಿಗೆ ಒಳಪಡಬೇಕೆಂದು ಸರ್ಕಾರ ಪವರು ಏನಾದರೂ ನಿಯಮವನ್ನು ಹಾಕಿದ್ದಾರೆಯೇ ?

† ಶ್ರೀ ಅಜೀಜ್ ಸೇಟ್.—ಅದನ್ನು ಎರಡು ವರ್ಷಗಳವರೆಗೆ ವಾರಾಳು ಮಾಡಕೂಡದೆಂದು ಹೇಳಿದ್ದೇವೆ.

ಶ್ರೀ ಕೆ. ಮಾದೇಗೌಡ.—ಸ್ಕೂಟರ್ ತೆಗೆದುಕೊಂಡ ವ್ಯಕ್ತಿಗಳು ಬಿಟ್ಟು ಯಾರು ಬೇಕಾದರೂ ಅದನ್ನು ಉಪಯೋಗಿಸಬಹುದೇ ಅಥವಾ ತೆಗೆದುಕೊಂಡ ವ್ಯಕ್ತಿಗಳೇ ಅದರ ಉಪಯೋಗವನ್ನು ಪಡೆಯತಕ್ಕ ಪ್ರಾತ್ರಾ ಸರ್ಕಾರದಲ್ಲಿದೆಯೇ ?

---

* Copy placed in the Mysore Legislature Library *Vide* No 38, dated 12th May 1973.

ಶ್ರೀ ಅಜೀಜ್‌ಸೇಟ್.—ನಾನು ಮೊದಲೇ ಹೇಳಿದ ಹಾಗೆ ಅದನ್ನು ಎರಡು ವರ್ಷಗಳವರೆಗೆ ಯಾರಿಗೂ ಮಾರಕೂಡದೆಂದು ಒಂದು ಕಂಡೀಷನ್ ಇದೆ. ಆದ್ದರಿಂದ ಯಾರೂ ಅದನ್ನು ಎರಡು ವರ್ಷದವರೆಗೆ ಮಾರಾಟಮಾಡುವುದಕ್ಕಾಗುವುದಿಲ್ಲ. ಒಂದು ವೇಳೆ ಅದನ್ನು ಯಾರಾದರೂ ಸರೆಂಡರ್ ಮಾಡಿದರೆ, ಅದು ನಮ್ಮ ಗಮನಕ್ಕೆ ಬಂದರೆ, ಸೂಕ್ತ ಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಎರಡು ವರ್ಷಗಳ ಅವಧಿಯನ್ನು ಸರ್ಕಾರದವರು ನಿಗದಿಮಾಡಿದ್ದರೂ ಅದನ್ನು ಮಾರಾಟಮಾಡುವವರು ಬಹಳ ಬುದ್ಧಿವಂತಿಕೆಯಿಂದ ಮಾರುತ್ತಿದ್ದಾರೆ. ರಿಜಿಸ್ಟ್ರೇಷನ್ ಮಾಡುವಾಗ ಅವರಿಂದ ದುಡ್ಡನ್ನು ಜಾಸ್ತಿ ತೆಗೆದುಕೊಂಡು ಕೇವಲ ಎರಡು ವರ್ಷಗಳಲ್ಲಿ ಐ.ಜಿ.ಪಿ. ಯವರಿಗೆ ಅರ್ಜಿಹಾಕಿ ಟ್ರಾನ್ಸ್‌ಫರ್ಸ್ ಮಾಡಿಕೊಂಡಿರುವ ನಿದರ್ಶನಗಳು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್‌ಸೇಟ್.—ಮಾನ್ಯ ಸದಸ್ಯರು ಹೆಚ್ಚು ಬುದ್ಧಿವಂತಿಕೆಯಿಂದ ಪ್ರಶ್ನೆ ಕೇಳುತ್ತಾ ಇದ್ದಾರೆ. ಉಪ್ಪು ತಿಂದವ, ನೀರು ಕುಡಿಯಲೇ ಬೇಕು. ಹಾಗೆ ನಿಯಮಕ್ಕೆ ವಿರೋಧವಾಗಿ ನಡೆದಿದ್ದೇ ಆದರೆ, ಅವನು ತೊಂದರೆಯನ್ನು ಅನುಭವಿಸಬೇಕಾಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಸ್ಕೂಟರ್ ಅಲಾಟ್‌ಮೆಂಟ್ ಪ್ರೈಯಾರಿಟಿ ಬೇಸಿಸ್ ಮೇಲೆ ಮಾಡುತ್ತೀವೆಂದು ಹೇಳಿದ್ದೀರಿ. ಮೊದಲಿನಿಂದಲೂ ಎಷ್ಟೋ ಅರ್ಜಿಗಳು ಇದುವರೆಗೆ ಸರ್ಕಾರಕ್ಕೆ ಬಂದಿವೆ. ನೀವು ಅದನ್ನು ಅರ್ಜಿಗಳು ಬಂದ ಹಾಗೆ ಪ್ರೈಯಾರಿಟಿಯ ಮೇಲೆ ಅಲಾಟ್‌ಮೆಂಟ್ ಮಾಡುತ್ತೀರಾ ಅಥವಾ ನಿಮಗೆ ಯಾರ್ಯಾರಿಗೆ ಬೇಕೋ ಅವರಿಗೆ ನೀವೇ ಆಯ್ಕೆ ಮಾಡುತ್ತೀರೋ ?

ಶ್ರೀ ಅಜೀಜ್‌ಸೇಟ್.—ಸ್ಕೂಟರ್‌ಗಾಗಿ ಅರ್ಜಿಗಳು 8–10 ವರ್ಷಗಳಿಂದಲೂ ಇವೆ. ಕೆಲವು ಆಫೀಸರ್ಸ್ ಇದನ್ನು ಕೇಳಿ ಕೇಳಿ ರಿಜೈರಾಗಿ ಮನೆಗೆ ಹೋಗಿರುವ ಸಂದರ್ಭಗಳೂ ಬಂದಿವೆ. ಈಚೀಚೆಗೆ ಬಂದಿರುವವರು ಅವನ್ನು ನಮಗೆ ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಆದ್ದರಿಂದ ಅಲಾಟ್‌ಮೆಂಟ್ ಅಪ್ಲಿಕೇಷನ್ಸ್ ಎಷ್ಟಿವೆಯೆಂಬುದನ್ನು ಕಂಡುಹಿಡಿದು ಅದಕ್ಕಾಗಿ ಒಂದೆರಡು ದಿವಸಗಳು ಕೂತು ಅವರ ಬಗ್ಗೆ ಒಂದು ನಿರ್ಣಯಕ್ಕೆ ಬರಬೇಕಾಗಿದೆ. 40 ಸ್ಕೂಟರುಗಳು ಅಲಾಟ್‌ಮೆಂಟಿಗೆ ಸೇರಿದ 50ರಷ್ಟು ಆಫೀಸರ್ಸ್, ಎಂ.ಎಲ್.ಎ. ಹಾಗೂ ಎಂ.ಎಲ್.ಸಿ. ಗಳು ಹಾಗೂ ಸೋಷಿಯಲ್ ವರ್ಕರ್ಸ್ ಅರ್ಜಿಗಳನ್ನು ಹಾಕಿ ಅದನ್ನು ಕೊಡಬೇಕೆಂದು ಕೇಳಿಕೊಂಡಿರುತ್ತಾರೆ. ಆದ್ದರಿಂದ ಟಾಪ್ ಪ್ರೈಯಾರಿಟಿ ಕೆಲವಕ್ಕೆ ಕೊಡಬೇಕಾಗುತ್ತದೆ, ಇನ್ನು ನಮ್ಮ ಡಿಸ್ಕ್ರಿಷನ್ ಕೆಲವು ಸಂದರ್ಭಗಳಲ್ಲಿ ಉಪಯೋಗ ಮಾಡಬೇಕಾಗುತ್ತದೆ. ಅದೂ ಅಲ್ಲದೆ ಮಿನಿಸ್ಟರ್ಸ್ ಕಡೆಯಿಂದ ಕೆಲವು ಸಂದರ್ಭಗಳಲ್ಲಿ ಯಾರಾದರೂ ಕಟ್ಟಕಡೆಯಲ್ಲಿ ಒತ್ತಡ ತರುತ್ತಾರೆ. ಇವೆಲ್ಲವನ್ನೂ ಪರಿಶೀಲಿಸಿ ಅಲಾಟ್‌ಮೆಂಟ್ ಮಾಡಬೇಕಾಗುತ್ತದೆ. ಸ್ಕೂಟರುಗಳು ಅಲಾಟ್ ಆಗುವುದು 40 ಆದರೆ, 500 ಜನರ ಪ್ರೆಷರ್ ಬರುತ್ತದೆ. ಇದೇ ಸ್ಕೂಟರುಗಳ ವ್ಯವಹಾರ.

ಶ್ರೀ ಕೆ. ಎಂ. ನಾಗಣ್ಣ.—ಈ ಸ್ಕೂಟರ್‌ಗಳನ್ನು ಪ್ರೈಯಾರಿಟಿಯ ಮೇಲೆ ಅಲಾಟ್ ಮಾಡುವಾಗ ತಾವು ಮುಖ್ಯಾಧಿಕಾರಿಗಳಿಗೆ ಹಾಗೂ ಪ್ರಭಾವಯುತ ಎಂ. ಎಲ್. ಎ. ಗಳಿಗೆ ಸ್ಕೂಟರ್‌ಗಳನ್ನೂ ಮತ್ತು ಕಾರುಗಳನ್ನೂ ಅಲಾಟ್ ಮಾಡಿದ್ದೀರಿ. ಇದು ಅನ್ಯಾಯವಲ್ಲವೇ ? ಈ ರೀತಿ ಮಾಡುವುದು ನಿಮ್ಮ ಸರ್ಕಾರದ ಧೋರಣೆಗೆ ಸರಿಯಾದ ನೀತಿಯೇ ?

ಶ್ರೀ ಅಜೀಜ್‌ಸೇಟ್.—ಪ್ರಭಾವಯುತ ಎಂ. ಎಲ್. ಎ. ಗಳು 216 ಜನರಿದ್ದಾರೆ. ಅಷ್ಟೇ ಪ್ರಭಾವಶಾಲಿಗಳಾಗಿ 63 ಜನ ಎಂ.ಎಲ್.ಸಿ.ಗಳು ಇದ್ದಾರೆ. ಯಾರು ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ ಕೂಡ ಒಂದು ನಿಯಮವಿದೆ. ಅದೇನೆಂದರೆ, ಸ್ಕೂಟರ್ ತೆಗೆದುಕೊಂಡವರಿಗೆ ಕಾರನ್ನು ಕೊಡಬಾರದೆಂದು. ಸ್ಕೂಟರ್ ಅಲಾಟ್‌ಮೆಂಟ್ ಮಾಡುವುದು ನನ್ನ ಕಡೆಗೆ ಬರುತ್ತದೆ. ಕಾರ್ ಅಲಾಟ್‌ಮೆಂಟ್ ಮಾಡುವುದು ಮಾನ್ಯ ಮುಖ್ಯಮಂತ್ರಿಯವರ ಕಡೆಗೆ ಬರುತ್ತದೆ. ಆದರೂ ಕೆಲವರು ನಮ್ಮಲ್ಲಿಯೇ ಇರತಕ್ಕ ನಿಜಾಂಶವನ್ನು ಮುಚ್ಚಿಟ್ಟು ತೆಗೆದುಕೊಂಡಿರುತ್ತಾರೆ. ಉದಾಹರಣೆಗೆ ಹೇಳುವುದಾದರೆ ಬಿಜಾಪುರದ ಯಜಮಾನರು ಕಾರೂ ತೆಗೆದುಕೊಂಡಿದ್ದಾರೆ, ಸ್ಕೂಟರ್ ತೆಗೆದುಕೊಂಡಿದ್ದಾರೆ. ಸ್ಕೂಟರ್ ವಾಪಸ್ಸು ಮಾಡಿದರೆ ಕಾರ್ ಅಲಾಟ್‌ಮೆಂಟ್ ಕೊಡಬಹುದು. ಏಕೆಂದರೆ ಸ್ಕೂಟರ್ ಕೊಟ್ಟವರಿಗೆ ಕಾರು ಕೊಡಬಾರದೆಂದು ನಿಯಮವಿದೆ. ಅದನ್ನು ಒಪ್ಪಿಕೊಂಡ ಮೇಲೆ ಪ್ರಭಾವಶಾಲಿ ಎಂ.ಎಲ್.ಎ. ಅಥವಾ ಎಂ.ಎಲ್.ಸಿ. ಯಾರೇ ಇದ್ದರೂ ದಯಮಾಡಿ ಕೂಡಲೇ ಸ್ಕೂಟರ್ ಅಥವಾ ಕಾರ್ ಅಲಾಟ್‌ಮೆಂಟನ್ನು ವಾಪಸ್ಸು ಮಾಡಬಹುದೆಂದು ಅವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.